ಶ್ರೀ ಎಸ್. ನಿಜಲಿಂಗಪ್ಪ.—ಹರಿಜನರಿಗೆ ಎಲ್ಲ ಕುಡಿಯುವ ನೀರಿನ ಬಾವಿಗಳಿಲ್ಲ ಎಂದು ಬಂದು ಕೇಳಿದರೆ ಅವರಿಗೆ ಅದನ್ನು ಕೊಡಿಸಿಕೊಡುತ್ತೇವೆ. ನಾವು ಯಾವ ಹಣವನ್ನೂ ಇಲ್ಲಿ ಉಳಿಸುತ್ತಿಲ್ಲ ಮತ್ತು ಹಾಗೆ ಉಳಿಸುವ ಉದ್ದೇಶವೂ ಇಲ್ಲ. ಎಲ್ಲೆಲ್ಲಿ ಕುಡಿಯುವ ಬಾವಿಗಳು ಇಲ್ಲ ಎಂದು ಬಂದು ಕೇಳುತ್ತಾರೋ ಅವರಿಗೆ ಕೊಡಲು ಅಡ್ಡಿಯೇನಿಲ್ಲ.

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ.—ಡೈರಿ ಸ್ಕೀಂಗಾಗಿ ಸುಮಾರು ಒಂದು ಲಕ್ಷ ಹಣ ಬಡ್ಜೆಟ್ಟಿನಲ್ಲಿ ಕಾಣಿಸಿವ್ವೀರಿ, ರಾಜ್ಯದಲ್ಲಿ ಎಲ್ಲಿಯೂ ಡೈರಿ ಸ್ಕೀಂಗಳು ಆಗುತ್ತಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಹಾಕಿದರೆ ಆಗ ಉತ್ತರ ಕೊಡಬಹುದು.

Growing of Hybrid Jowar.

*Q.—499. Sri S. KARIYAPPA (Kanakapura).—

Will the Government be pleased to state :—

(*a*) whether the growing of hybrid jowar would be extended to the Southern districts of the State also ;

(*b*) the cost of production for each K.G. of Hybrid Jowar ;

(*c*) the area of distribution of this seed at present ;

(*d*) the selling price of this seed per K.G ;

(*e*) whether any subsidy is allowed ;

(*f*) if so, by whom ?

A.—Sri S. NIJALINGAPPA (Chief Minister) [on behalf of Sri G. Narayana Gowda (Minister for Agriculture)].—

(*a*) Yes.

(*b*) Rs. 3 per K.G. (Average cost).

(*c*) Mysore State.

(*d*) Rs. 5 to 6.

(*e*) No.

(*f*) Does not arise.

ಶ್ರೀ ಎಸ್. ಕರಿಯಪ್ಪ.—ಮೈಸೂರು ರಾಜ್ಯದಲ್ಲಿ ಕೆಲವು ಜಿಲ್ಲೆಗಳಲ್ಲಿ ಎಲ್ಲಿಯಾದರೂ ಹೈಬ್ರಿಡ್ ಜೋಳದ ಬೀಜಗಳನ್ನು ಬೆಳೆಯುವ ವ್ಯವಸ್ಥೆ ಮಾಡಿದ್ದೀರಾ ? ಮತ್ತು ಇನ್ನು ಮುಂದೆ ಯಾವ ಯಾವ ಕಡೆಗಳಲ್ಲಿ ಇಂತಹ ಹೈಬ್ರಿಡ್ ಜೋಳದ ಬಿತ್ತನೆ ಬೀಜಗಳನ್ನು ಬೆಳೆಯುವ ವ್ಯವಸ್ಥೆ ಮಾಡಲು ಆಲೋಚನೆ ಮಾಡಿಕೊಂಡಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಸಧ್ಯದಲ್ಲಿ ರಾಯಚೂರು ಜಿಲ್ಲೆಯಲ್ಲಿ 547 ಎಕರೆಗಳಲ್ಲಿ ಧಾರವಾಡದಲ್ಲಿ 347 ಎಕರೆ, ಬಳ್ಳಾರಿಯಲ್ಲಿ 61 ಎಕರೆ, ಬಿಜಾಪುರದಲ್ಲಿ 195 ಎಕರೆಗಳು, ಬೆಳಗಾಂನಲ್ಲಿ 147 ಎಕರೆಗಳು, ಶಿವಮೊಗ್ಗಾದಲ್ಲಿ 63 ಎಕರೆಗಳು, ಚಿತ್ರದುರ್ಗದಲ್ಲಿ 75 ಎಕರೆಗಳು ಗುಲ್ಬರ್ಗಾದಲ್ಲಿ 2 ಎಕರೆಗಳು ಬೆಂಗಳೂರಿನಲ್ಲಿ 5 ಎಕರೆಗಳು ಎಂದು ಬೆಳೆ ಮಾಡಲು ಪ್ರಯತ್ನ ನಡೆದಿದೆ.

ಶ್ರೀ ಎಸ್. ಕರಿಯಪ್ಪ.—ಹೈಬ್ರಿಡ್ ಜೋಳ ಬೆಂಗಳೂರು ಜಿಲ್ಲೆಯಲ್ಲಿರುವ ಮಳವಳ್ಳಿ ಹಾಗೂ ಮಂಡ್ಯ ಈ ಕಡೆಗಳಲ್ಲಿ ಕೇಳಿದರೆ ಒದಗಿಸಿ ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅಲ್ಲಿನವರು ಕೇಳಿದರೆ ಅವರಿಗೂ ಕೊಡುತ್ತೇವೆ ಮತ್ತು ಹೆಚ್ಚಾಗಿ ಬೇಕಾದರೂ ಕೊಡುತ್ತೇವೆ. ಈ ಸಲ ನಮಗೆ ಸಾಕಷ್ಟು ಬಿತ್ತನೆ ಬೀಜ ಬರುತ್ತದೆ. ಸುಮಾರು ಒಂದು ಲಕ್ಷ ಎಕರೆಗಳಲ್ಲಿ ಸಾಗುವಳಿಯಾಗುತ್ತಿದೆ, ಬೀಜಗಳನ್ನು ತಯಾರು ಮಾಡುತ್ತಿದ್ದಾರೆ ಯಾರು ಬೇಕೆಂದು ಅಪೇಕ್ಷೆಪಟ್ಟರೂ ಅವರಿಗೆ ನಪ್ಪೈ ಮಾಡಬಹುದು ಮತ್ತು ಈಗಾಗಲೇ ಈ ಬೀಜಗಳನ್ನು ಉತ್ಪತ್ತಿ ಮಾಡಲು ಪ್ರಯತ್ನಗಳು ನಡೆಯುತ್ತಿವೆ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನೀವು ಬತ್ತನೆ ಬೀಜಗಳನ್ನು ಮಾಡಿ ಕೊಡುವುದು ಎಂದರೆ ಮೇ ತಿಂಗಳು ಆಖೈರಿನಲ್ಲಿ ಎಂದು ಕಾಣುತ್ತೆ. ಆದರೆ ನಮ್ಮ ಹಳೆ ಮೈಸೂರಿನ ಭಾಗದಲ್ಲಿ ಜೋಳ ಬತ್ತಬೇಕು ಎಂದರೆ, ರೇವತಿ ಮಳೆ ಬಿದ್ದಮೇಲೆ ಅಲ್ಲಿನ ಜನ ಬಿತ್ತುತ್ತಾರೆ. ಆ ಕಾಲದಲ್ಲಿ ಅವರಿಗೆ ಈ ಬೀಜಗಳು ಸಿಗುವ ಹಾಗೆ ಏರ್ಪಾಡು ಮಾಡಲು ಏನಾದರೂ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈ ವಿಚಾರವನ್ನು ಮಾನ್ಯ ಸದಸ್ಯರೇ ಈಗ್ಗೆ ಎರಡು ದಿವಸಗಳ ಹಿಂದೆ ನನ್ನಲ್ಲಿ ಹೇಳಿದರು. ಇದರ ಬಗ್ಗೆ ವಿಚಾರ ಮಾಡಿ ಆದಷ್ಟು ಜಾಗ್ರತೆ ಏನು ಕಾರ್ಯಕ್ರಮ ಬೇಕೋ ಅದನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಮಲೆನಾಡಿನಲ್ಲಿ ಇಂತಹ ಹೈ ಬ್ರಿಡ್ ಜೋಳ ಬೆಳೆಯಾಗುತ್ತ ದೆಯೇ ಎನ್ನುವುದನ್ನು ವ್ಯವಸಾಯ ಇಲಾಖೆಯಲ್ಲಿ ಸಂಶೋಧನೆ ಏನಾದರೂ ಮಾಡಿದ್ದಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಮಲೆನಾಡಿನಲ್ಲೂ ಬೆಳೆಯಬಹುದು ಎಂದು ಕಾಣುತ್ತೆ. ಇದೇನೂ ಕಷ್ಟವಲ್ಲ. ಮಾನ್ಯ ಸದಸ್ಯರು ಬೆಳೆಯುತ್ತೇವೆಂದರೆ ಅವರಿಗೂ ಬೀಜಗಳನ್ನು ಕೊಡಬಹುದು ಮತ್ತು ಜನಕ್ಕೂ ಇದರಿಂದ ಅನುಕೂಲವಾಗುತ್ತದೆ. ನಮಗೆ ಬೀಜ ಬೇಕೆಂದು ತಿಳಿಸಿದರೆ ಅವರಿಗೂ ಬೀಜ ಗಳನ್ನು ಒದಗಿಸಿ ಕೊಡುತ್ತೇವೆ.

ಶ್ರೀ ಎಸ್. ಎಂ. ಗುರ್ರೆಡ್ಡಿ.—ಈಗ ಮಿಶ್ರ ತಳಿ ಬೀಜ ಕೇ.ಜಿ.ಗೆ 8–10 ರೂಪಾಯಿಗಳಿಗೆ ಮೇಲ್ಪಟ್ಟು ಮಾರುತ್ತಿರುವುದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಸಾಮಾನ್ಯ ಬಡರೈತ ನಿಗೆ ಇಷ್ಟು ದುಡ್ಡು ಕೊಟ್ಟು ಕೊಂಡುಕೊಳ್ಳಬೇಕೆಂದರೆ ಕಷ್ಟವಾಗುತ್ತದೆ. ಇಂತಹವರಿಗೆ ಸರ ಕಾರ ಏನಾದರೂ ನಬ್‌ಸಿಡಿ ಕೊಡುವ ಏರ್ಪಾಡು ಮಾಡುತ್ತಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ನಬ್‌ಸಿಡಿಯನ್ನೇನೂ ಕೊಡಬೇಕಾಗಿಲ್ಲ. ಕೆಲವರು ಹಿಂದೆ 15 ರೂಪಾಯಿಗಳನ್ನು ಕೊಟ್ಟು ತರಿಸಿಕೊಳ್ಳುತ್ತಿದ್ದರು, ಇಪ್ಪೊತ್ತು ಸರಕಾರ ಆರು ರೂಪಾಯಿಗಳ ರೇಟಿನಂತೆ ಕೊಡುತ್ತಿರುವುದರಿಂದ ಅಂತಹ ಕಷ್ಟವೇನೂ ಆಗುವುದಿಲ್ಲ. ಕೆಲವರು ಡೆಲ್ಲಿ ಹಾಗೂ ಕೊಯಮತ್ತೂರುಗಳಿಂದ ಬೀಜಗಳನ್ನು ತರಿಸಿಕೊಳ್ಳುತ್ತಿರುವುದರಿಂದ ಅಲ್ಲಿ ಸ್ವಲ್ಪ ಧಾರಣೆ ಹೆಚ್ಚು ಕೊಟ್ಟು ತರುತ್ತಿದ್ದಾರೆ. ಈಗ ಸರಕಾರದವರೇ 5–6 ರೂಪಾಯಿಗಳಂತೆ ಮಾರುತ್ತಿದ್ದಾರೆ. ಇದರಿಂದೇನೂ ಅಂತಹ ಕಷ್ಟವೇನೂ ಆಗುವುದಿಲ್ಲ.

ಶ್ರೀ ಎಂ. ಸಿ. ಬಸಪ್ಪ.—ಮೈಸೂರು ಜಿಲ್ಲೆಯಲ್ಲಿರುವ ಹರದನಹಳ್ಳಿ ರೀಜನಲ್ ಸೀಡ್ ಫಾರಂ ನಲ್ಲಿ ಮೈಸೂರಿಗೆ ಹೆಚ್ಚು ಬೀಜಗಳನ್ನು ಬೆಳೆದು ಒದಗಿಸಬೇಕು ಎಂದು ಮಾಡುತ್ತಿರುವುದು ಸರಕಾ ರದ ಗಮನದಲ್ಲಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಇದರ ವಿಚಾರ ತಿಳಿಸಿದ್ದಾರೆ. ಇದನ್ನು ಕೂಡ ಮಾಡಿಸಿಕೊಡುತ್ತೇವೆ.

ಶ್ರೀ ಎಸ್. ಕರಿಯಪ್ಪ.—ಹಳ್ಳಿಯ ರೈತರು ಇಂತಹ ಬೀಜಗಳನ್ನು ಒದಗಿಸಬೇಕು ಎಂದು ವ್ಯವಸಾಯದ ಇಲಾಖೆಯವರನ್ನು ಕೇಳಿದರೆ ಬೀಜಗಳು ದೊರೆಯುತ್ತಿಲ್ಲ ಎಂದು ಹೇಳುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಹಾಗೇನೂ ಯಾವ ದೂರುಗಳೂ ಸರಕಾರದ ಗಮನಕ್ಕೆ ಬಂದಿಲ್ಲ. ಎಷ್ಟು ಬೀಜ ಬೇಕೆಂದು ಕೇಳಿದರೂ ಅದನ್ನು ಕೊಡಲು ಸಹಾಯ ಮಾಡುತ್ತೇವೆ. ಮತ್ತು ಇನ್ನೂ ಹೆಚ್ಚು ಬೀಜಗಳ ಸಹಾಯ ಬೇಕೆಂದು ಕೇಳಿದರೂ ಕೊಡಲು ಸಿದ್ಧರಾಗಿದ್ದಾರೆ. ಇದಕ್ಕೇನೂ ವಿಚಾರ ಮಾಡಬೇಕಾದ್ದಿಲ್ಲ.

ಶ್ರೀ ಟಿ. ಕೆ. ಕಂಬಳಿ.—ಮಿಶ್ರ ತಳಿ ರಾಗಿ, ಬತ್ತದ ಬೀಜ ಮಾಡುತ್ತಾ ಇದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ರಾಗಿ ಮಾಡಬೇಕಾಗುತ್ತದೆ, ಅದು ಮಾಡಿದೆಯೋ ಇಲ್ಲವೋ ಗೊತ್ತಿಲ್ಲ. ವಿಚಾರ ಮಾಡಿ ಹೇಳಬೇಕಾಗುತ್ತದೆ. ಅದು ಇನ್ನೂ ಪ್ರಯೋಗದ ಸ್ಟೇಜ್‌ನಲ್ಲಿ ಇದೆ, ರಾಗಿ ಬರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಬತ್ತದ ವಿಚಾರದಲ್ಲೂ ಪ್ರಯೋಗ ಮಾಡಬೇ ಕಾಗುತ್ತದೆ ಬೇರೆ ಕಡೆಯಿಂದ ಈಗ ತರಿಸುತ್ತಾ ಇದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಒಂದು ಕೆ.ಜಿ.ಗೆ 10-12 ರೂಪಾಯಿ ಕೊಟ್ಟರೆ ಹೆಚ್ಚು ಅಂತ ಹೇಳಿದಿರಿ. ಒಂದು ಎಕರೆಯಲ್ಲಿ ಸಾಮಾನ್ಯವಾಗಿ 6 ರಿಂದ 8 ಕೆ.ಜಿ. ಜೋಳ ಆಗುತ್ತದೆ. ಆದ್ದರಿಂದ ಒಂದು ಎಕರೆಗೆ ಇಷ್ಟು ದುಡ್ಡು ಕೊಟ್ಟು ತರುವುದಕ್ಕೆ ಸಾಧ್ಯವೇ ? 12 ರೂಪಾಯಿನಂತೆ ಕೊಟ್ಟು ತಂದು ಅವರು ಎಷ್ಟು ಎಕರೆಯಲ್ಲಿ ಬೆಳೆಯಬಹುದು ? ಆದ್ದರಿಂದ ಸರ್ಕಾರದವರು ಸಬ್ಸಿಡಿ ಕೊಟ್ಟು ಇದನ್ನು ತರಿಸಿಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಸಬ್ಸಿಡಿ ಕೊಡಬೇಕಾದ ಪ್ರಶ್ನೆ ಬರುವುದಿಲ್ಲ. ನುಮಾರು 40 ಟೀಲದ ವರೆಗೂ ಬರುತ್ತದೆ. ಇಲ್ಲಿಯವರೆಗೂ ಬಂದಿರುವುದು ಬೀಜದ ಅಭಾವ. ಇನ್ನುಮುಂದೆ ಆ ಕಷ್ಟ ಇರುವುದಿಲ್ಲ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ಸುಮಾರು ಒಂದು ಲಕ್ಷ ಎಕರೆಗೆ ಬೀಜ ನಂಗ್ರಹಿಸಿದ್ದೇವೆ ಎಂದು ಹೇಳಿದಿರಿ. ಅನೇಕ ಕಡೆ ಪ್ರಯತ್ನ ಮಾಡಿದ ಕಡೆಯಲ್ಲೆಲ್ಲಾ ಫೇರ್ ಆಗಿದೆ, ಅರ್ಧಕ್ಕರ್ಧ ಅಂದುಕೊಂಡದ್ದರಲ್ಲಿ ಫೇರ್ ಆಗಿದೆ. ಆದ್ದರಿಂದ ಇದನ್ನು ಸೀಡ್ ಕಾರ್ಪೊರೇಷನಿಂದ ತರಿಸಿದರೆ ರೈತರಿಗೆ ಆಗ್ಗದ ದರದಲ್ಲಿ ಸಿಕ್ಕಬಹುದು ಈ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅರ್ಧಕ್ಕರ್ಧ ಫೇರ್ ಆಗಿರುವ ವಿಚಾರ ತಿಳಿಸಿದ್ದೀರಿ, ಹಾಗೆ ಆಗ ಬಾರದು; ಆದರೆ ಬೇರೆ ಕಡೆಯಿಂದ ತರಿಸುವ ಪ್ರಯತ್ನ ಮಾಡಬೇಕಾಗುತ್ತದೆ. ಅದನ್ನು ವಿಚಾರ ಮಾಡಿ ನೋಡಬೇಕಾಗುತ್ತದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತೆಂಗಿನ ಕಾಯಿ ಅಭಾವ ಜಾಸ್ತಿಯಾಗಿರುವುದರಿಂದ ಅದಕ್ಕೂ ಕೂಡ ಇಂತಹ ಒಂದು ವ್ಯವಸ್ಥೆ ಮಾಡುವುದಕ್ಕೆ ತೀವ್ರ ಗಮನ ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಇದು ಹೊಸ ಪ್ರಶ್ನೆ, ಈ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ.

ಶ್ರೀಮತಿ ನುತೀರಾಬಾಯಿ ಹೀರಾಚಂದ್.—ವಿಶ್ರತಳಿ ಬೀಜ ಬಿಜಾಪುರ ಜಿಲ್ಲೆಯಲ್ಲಿ ಸಿಕ್ಕ ಬೇಕೆಂದು ಹೇಳಿ ರೊಕ್ಕ ತುಂಬಿದ್ದರೂ ಸಹ ಅವರಿಗೆ ಸಿಕ್ಕಲಿಲ್ಲ. ಆದ್ದರಿಂದ ಅದನ್ನು ಬೇಕಾದ ಕಾಲಕ್ಕೆ ಸರಿಯಾಗಿ ತರಿಸಿ ಕೊಡುವುದಕ್ಕೆ ವ್ಯವಸ್ಥಾ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈ ವರ್ಷ ಈ ಪ್ರಯತ್ನ ನಡೆಯುತ್ತಾ ಇದೆ. ಗೋಧಿ, ಜೋಳ, ಮುಸುಕಿನ ಜೋಳ, ನಜ್ಜೆ, ಈ ಕಷ್ಟ ಮುಂದಿನ ವರ್ಷದಲ್ಲಿ ಇರಲಿಕ್ಕಿಲ್ಲ ಎಂದು ಅನಿಸುತ್ತದೆ.

ಶ್ರೀ ಸಿದ್ದಯ್ಯ ಕಾಶೀಮಠ್.—ರಾಜ್ಯದಲ್ಲಿ ಹೆಚ್ಚು ಕಬ್ಬು ಬೆಳೆದವರಿಗೆ ಫಸ್ಟ್ ಪ್ರೈಸ್, ಅಂತ ಹೇಳಿ 500 ರೂಪಾಯಿ, ಸೆಕೆಂಡ್ ಪ್ರೈಸ್ ಅಂತ 300 ರೂಪಾಯಿ, ಮೂರನೆಯ ಪ್ರೈಸ್ ಅಂತ ಹೇಳಿ 200 ರೂಪಾಯಿ ಕೊಡುತ್ತಾ ಇದ್ದಾರೆ. ಅದೇ ರೀತಿ ಮಿಶ್ರ ತಳಿ ಬೆಳೆದವರಿಗೂ ಕೂಡ ಫಸ್ಟ್, ಸೆಕೆಂಡ್, ಥರ್ಡ್ ಪ್ರೈಸ್ ಅಂತ ಕೊಟ್ಟು ರೈತರಿಗೆ ಉತ್ತೇಜನ ಕೊಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಇದು ಯೋಚನೆಗೆ ಅರ್ಹವಾದ ಸೂಚನೆ.

ಶ್ರೀ ಎಫ್. ಎಸ್. ತಾವರೆ.—ಮಿಶ್ರತಳಿ ಬೀಜವನ್ನು ಬಹಳ ಉತ್ಸಾಹದಿಂದ ತೆಗೆದುಕೊಂಡು ಹಾಕಿದ್ದಾರೆ. ಅಂತಹ ಕಡೆಯಲ್ಲಿ ನೂರಕ್ಕೆ 75 ಭಾಗ ಫೇರ್ ಆಗಿದೆ. ಧಾರವಾಡ ಜಿಲ್ಲೆಯಲ್ಲಿ ಈ ರೀತಿಯಾಗಿ ರೈತರು ನಿರಾಶರಾಗಿದ್ದಾರೆ. ಆದ್ದರಿಂದ ತಜ್ಞರಿಂದ ಇದನ್ನು ಪರೀಕ್ಷೆ ಮಾಡಿಸಿ ನೋಡಿ ಇದಕ್ಕೆ ರೋಗ ಬರದಂತೆ ನೋಡಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಮಾಡಬೇಕಾದ್ದು ಬಹಳ ಅವಶ್ಯಕ. ಇದು ಹೊಸ ಪ್ರಯೋಗ, ಆದ್ದರಿಂದ ಬಹುಶಃ ಈ ವರ್ಷ ಮಾಡಿದ್ದರಲ್ಲಿ ತಪ್ಪೇನಾದರೂ ಆಗಿದ್ದರೆ ಅದು ಮುಂದಿನ ವರ್ಷದಲ್ಲಿ ನಿವಾರಣೆಯಾದೀತು ಎಂಬ ನೀರಿಕ್ಷಣೆ ಇದೆ.

ಶ್ರೀ ಎಂ. ಸಿ. ಬನಪ್ಪ.—ಮುಂದಿನ ಏಪ್ರಿಲ್‌ನಲ್ಲಿ ಜೋಳ ಬೇಕಾಗುತ್ತದೆ. ಆದ್ದರಿಂದ ಆ ಸೀಸನ್‌ನಲ್ಲಿ ನರಬರಾಯಿ ಮಾಡುವುದಕ್ಕೆ ಸರ್ಕಾರದವರ ಹತ್ತಿರ ಬೀಜವನ್ನು ಇಟ್ಟುಕೊಂಡಿದ್ದೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಶ್ರೀಮತಿ ನಾಗರತ್ನಮ್ಮನವರ ಪ್ರಶ್ನೆಗೆ ಉತ್ತರ ಹೇಳಿದ್ದೇನೆ. ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ಮುಂದಿನ ತಿಂಗಳು ಪ್ರಾರಂಭ ಮಾಡುತ್ತಾರೆ. ಹೊರಗಡೆ ಸಿಕ್ಕುವುದಾದರೆ ಪ್ರಯತ್ನ ಪಟ್ಟು ತರಿಸಿಕೊಡುತ್ತೇವೆ.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಬೇಸಿಗೆ ಬೆಳೆ ಬೆಳೆಯುವುದಕ್ಕೆ ಈಗ ತಾವು ಏರ್ಪಾಡು ಮಾಡಿದ್ದೀರಿ, ಮಳೆಕಾಲದಲ್ಲಿ ಬೆಳೆಯುವುದಕ್ಕೆ ಈ ಬೀಜದಿಂದ ಅನುಕೂಲವಾಗುತ್ತದೆಯೇ ಹೇಗೆ ಅಂತ ಪರೀಕ್ಷೆ ಮಾಡಿಸಿ ಮಳೆ ಬೀಳತಕ್ಕ ಪ್ರದೇಶಗಳಲ್ಲಿ ಆ ಸೀಸನ್‌ನಲ್ಲಿ ಈ ಒಂದು ಪ್ರಯೋಗವನ್ನು ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆಯೇ ?

ಶ್ರೀ ಎಸ್ ನಿಜಲಿಂಗಪ್ಪ.—ಮಾಡಬಹುದು. ಏಕೆಂದರೆ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲಾ ಬೆಳೆಯು ಬೇಕೆಂಬುದೇ ಸರ್ಕಾರದ ಅಭಿಪ್ರಾಯ ಆದ್ದರಿಂದ ಎಲ್ಲಾ ಪ್ರದೇಶಗಳಲ್ಲೂ ಪ್ರಯತ್ನ ಮಾಡಿನೋಡ ಬಹುದು.

———